# ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ ಸಿ ನಂಃ 141-2018**

ಫಿರ್ಯಾದಿ ಃ ಮೀನುಗಾರರ ಸಹಕಾರಿ ಸಂಘ ಲಿ. ತದಡಿ
ತದಡಿ, ಕುಮಟಾ

**- ವಿರುದ್ಧ -**

ಆರೋಪಿ ಃ ಶ್ರೀ. ರವಿಕಿರಣ ಮೋಹನ ನಾಯ್ಕ,
ವಯಸ್ಸುಃ 29 ವರ್ಷ, ಉಃ ಮೀನು ವ್ಯಾಪಾರ
ಸಾಃ ಬೆಲೆಗದ್ದೆ, ತದಡಿ, ಕುಮಟಾ

## ಃ ಆಪಾದನೆ ಃ

ಆರೋಪಿಯಾದ ನೀವು, ಪಿರ್ಯಾದಿ ಸಂಘದ ಸದಸ್ಯನಿದ್ದು, ಮೀನು ಉದ್ರಿ ಖಾತೆ ವ್ಯವಹಾರ ನಡೆಸುತ್ತಾ ಬಂದಿದ್ದು, ನಿಮ್ಮಿಂದ ಬಾಕಿ ಬರತಕ್ಕ ಹಣಕ್ಕೆ ಪಿರ್ಯಾದಿದಾರರು ದಿಃ13-09-2016 ರಂದು ನಿಮಗೆ ರಜಿಸ್ಟರ್ ನೋಟಿಸು ನೀಡಿ ಹಣವನ್ನು ಮರುಪಾವತಿಸುವಂತೆ ನಿಮ್ಮಲ್ಲಿ ಕೇಳಿದಾಗ, ನೀವು ಕಾರ್ಪೊರೇಶನ್ ಬ್ಯಾಂಕ್, ತದಡಿ ಶಾಖೆಯ ದಿಃ2-11-2016ರ ಚೆಕ್ಕ ನಂ.064934 ನೇದನ್ನು ರೂ.38,66,000/-ಗಳಿಗೆ ಅಂತಾ ನಮೂದಿಸಿ ನಗದಾಗುವಂತೆ ಚೆಕ್‌ನ್ನು ಪಿರ್ಯಾದಿಗೆ ಕೊಟ್ಟಿದ್ದು, ನೀವು ನೀಡಿದ ಸದರಿ ಚೆಕ್ಕನ್ನು ನಗದೀಕರಣಕ್ಕಾಗಿ ಹಾಜರಪಡಿಸಿದಾಗ, ನಿಮ್ಮ ಚೆಕ್ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ (Funds insufficient)ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ದಿಃ02-11-2016 ರಂದು ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ25-11-2016 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸ ನೀಡಿದ್ದು, ಸದರಿ ನೋಟಿಸು ನಿಮಗೆ ದಿಃ29-11-2016 ಜ್ಯಾರಿಯಾಗಿ 15 ದಿವಸಗಳಾದರೂ ನೀವು ನೋಟಿಸಗೆ ಉತ್ತರವನ್ನು ನೀಡದೇ, ಹಾಗೂ ಫಿರ್ಯಾದಿಗೆ ನೀಡಬೇಕಾದ ಹಣವನ್ನು ಕೊಡದೇ ಅಮಾನ್ಯಗೊಳ್ಳುವಂತಹ ಚೆಕ್‌ನ್ನು ಪಿರ್ಯಾದಿಗೆ ನೀಡಿ, ಕಲಂ 138 ಹಾಗೂ 142 ಎನ್.ಐ.ಆ್ಯಕ್ಟ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಏನು ಹೇಳುತ್ತೀರಿ ?

ಉತ್ತರಃ

ಪ್ರಶ್ನೆ.1) ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ ?

ಉತ್ತರಃ

ಪ್ರಶ್ನೆ.2) ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ? ಪ್ರತಿ ರಕ್ಷೆ ಇದೆಯೇ?

ಉತ್ತರಃ

ಸ್ಥಳಃ ಕುಮಟಾ

ತಾಃ14-01-2019

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕುಮಟಾ.